# ಪ್ರಜಾವಾಣಿ

# 'ಏಕಾಗ್ರತೆಯಿಂದ ಯಶಸ್ಸು'



ಹಳಿಯಾಳ: 'ಮಾನಸಿಕ ಸ್ಥೈರ್ಯ, ಏಕಾಗ್ರತೆ, ಸಕಾರಾತ್ಮಕ ಚಿಂತನೆ ಹಾಗೂ ಉತ್ತಮ ಹವ್ಯಾಸಗಳು ಯಶಸ್ಸಿಗೆ ಸಹಕಾರಿಯಾಗಿವೆ' ಎಂದು ಗೀತಾ ಬೊಮ್ಮನಗೌಡರ್ ಹೇಳಿದರು.

ಪಟ್ಟಣದ ಕರ್ನಾಟಕ ಲಾ ಸೊಸೈಟಿಯ ವಿಶ್ವನಾಥರಾವ್ ದೇಶಪಾಂಡೆ ಗ್ರಾಮೀಣ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ವಿ.ಎ. ಕುಲಕರ್ಣಿ ಮಾತನಾಡಿದರು. ಗುರುರಾಜ ಹತ್ತಿ, ಪ್ರೊ. ಮಂಜುನಾಥ, ಶೈಲೇಶ ಚನ್ನಪಟ್ಟಣ, ಮಹೇಂದ್ರ ದೀಕ್ಷಿತ್, ಸಮೀರ್ ಗಲಗಲಿ ಪಾಲ್ಗೊಂಡಿದ್ದರು.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಥಮ ವರ್ಷದ ಪರೀಕ್ಷೆಗಳಲ್ಲಿ ಉತ್ತಮ ಶ್ರೇಯಾಂಕ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

September 10, 2025

# ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ



**»ಜನಮಾಧ್ಯಮ, ಹಳಿಯಾಳ:** ಧನಾತ್ಮಕ ಚಿಂತನೆ ಹಾಗೂ ಉತ್ತಮ ಹವ್ಯಾಸಗಳು ಯಶಸ್ಸಿನ ಹಾದಿಯಲ್ಲಿ ಸಾಗಲು ಸಹಕಾರಿ ಎಂದು ಡಾ. ಗೀತಾ ಬೊಮ್ಮನ ಗೌಡರ್ ಹೇಳಿದರು.

ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ 2025-26ರ ಸಾಲಿನ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವನ್ನು ಸೆ. 8 ರಂದು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಅತಿಥಿಯಾಗಿ ಧಾರವಾಡದ ಡಾ. ಗೀತಾ ಬೊಮ್ಮನ ಗೌಡರ್ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ,ಯಶಸ್ಸನ್ನು ಹೊಂದಲು ವಿದ್ಯಾರ್ಥಿಗಳು ಅನುಸರಿಸಬೇಕಾದ ಜೀವನ ಕ್ರಮ ಕುರಿತಾಗಿ ವಿವರಣೆ ನೀಡಿದರು. ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡು, ಮಾನಸಿಕ ಸ್ಥೈರ್ಯ ಹಾಗೂ ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಮಹಾವಿದ್ಯಾಲಯವು ಒದಗಿಸಿರುವ ಸೌಲಭ್ಯಗಳ ಕುರಿತಾಗಿ ತಿಳಿಸಿದರು. ಪ್ರಥಮ ವರ್ಷಕ್ಕೆ ಪ್ರವೇಶ ತೆಗೆದುಕೊಂಡ ಎಲ್ಲ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ಡೀನ್ ಅಕಾಡೆಮಿಕ್ ಡಾ. ಗುರುರಾಜ್ ಹತ್ತಿ ಸ್ವಾಗತಿಸಿದರು. ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ, ಸಂಶೋಧನಾ ಹಾಗೂ ಅಭಿವೃದ್ಧಿ ವಿಭಾಗದ ಡೀನ್ ಡಾ. ಶೈಲೇಶ್ ಚನ್ನಪಟ್ಟಣ ವಂದಿಸಿದರು. ಡೀನ್ ಐ ಐ ಐ ಡಾ. ಮಹೇಂದ್ರ ದೀಕ್ಷಿತ್, ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸಮೀರ್ ಗಲಗಲಿ ಸಂಯೋಜಿಸಿದ್ದರು.

ವಿತಾವಿ ಬೆಳಗಾವಿ ನಡೆಸಿದ ಪ್ರಥಮ ವರ್ಷದ ಪರೀಕ್ಷೆಗಳಲ್ಲಿ ಉತ್ತಮ ಶ್ರೇಯಾಂಕ ಪಡೆದು ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಪುರಸ್ಕರಿಸಲಾಯಿತು. ವಿದ್ಯಾರ್ಥಿಗಳ ವಿವರ ಇಂತಿದೆ :

ಕಂಪ್ಯೂಟರ್ ಸೈನ್ಸ್ ವಿಭಾಗ : ಸಾನಾ ಐ (9.55), ಸಹನಾ ಟಿ (9.53), ಸುಮಧುರ ಜಿ (9.38)

ಕಂಪ್ಯೂಟರ್ ಸೈನ್ಸ್ (ಎಐ ಆ್ಯಂಡ್ ಎಂಎಲ್) : ನಿರ್ಮಲಾ ಜಿ (9.35), ಸ್ನೇಹಾ ಜೆ (9), ಕವನಾ ಎಸ್ (8.85)

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗ: ಸ್ತುತಿ ಐ (9.35), ರಶ್ಮಿ ಟಿ (9.3), ಚೇತನ್ ಕೆ (9.3), ಚೈತಾಲಿ ಕೆ (9.3), ಚೈತ್ರ ಜಿ (9.25)

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗ : ಕಾವೇರಿ ಕೆ (8.80), ಶಶಾಂಕ್ ಬಿ (8.65), ಸುಸಾನ್ ಬಿ. (8.60)

ಮೆಕ್ಯಾನಿಕಲ್ ವಿಭಾಗ : ಸೃಷ್ಟಿ ಬಿ (7.7), ಹಾರ್ದಿಕ್ ಕೆ. (7.65), ಶ್ರೇಯಸ್ ಎಮ್. (7.6)

ಮಹಾವಿದ್ಯಾಲಯದ ಎಲ್ಲಾ ವಿಭಾಗದ ಡೀನ್‌ಗಳು ಹಾಗೂ ವಿಭಾಗ ಮುಖ್ಯಸ್ಥರು, ಪ್ರಥಮ ವರ್ಷದ 350ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಪೋಷಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಧನಾತ್ಮಕ ಚಿಂತನೆಯ ಪ್ರಭುತ್ವದಿಂದ ಬದುಕಿನ ಯಶಸ್ಸು ಸಾಧ್ಯ



ಹಳಿಯಾಳ, ಸೆ. 08: ವಿದ್ಯಾರ್ಥಿ ಜೀವನದಲ್ಲಿ ಮಾನಸಿಕ ಸ್ಥೈರ್ಯ, ಏಕಾಗ್ರತೆ, ಕಠಿಣ ಪರಿಶ್ರಮ ಅಳವಡಿಸಿಕೊಳ್ಳಬೇಕು. ಸದಾ ಧನಾತ್ಮಕ ಚಿಂತನೆ, ಉತ್ತಮ ಹವ್ಯಾಸ, ಓದುವ ಛಲ ರೂಡಿಸಿಕೊಂಡಲ್ಲಿ ಮುಂದಿನ ಬದುಕು ಯಶಸ್ವಿನ ಹಾದಿಯಲ್ಲಿ ಸಾಗಲು ಸಾಧ್ಯ ಎಂದು ಧಾರವಾಡದ ಡಾ. ಗೀತಾ ಭೂಮನಗೌಡರ ಹೇಳಿದರು.

ಕರ್ನಾಟಕ ಲಾ ಸೊಸಾಯಿಟಿಯವರ ಪಟ್ಟಣದ ವಿಶ್ವನಾಥರಾವ ದೇಶಪಾಂಡೆ ಎಂಜೀನಿಯರಿಂಗ್ ಕಾಲೇಜಿನ ಸಭಾ ಭವನದಲ್ಲಿ ಸೋಮವಾರ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳಸ್ವಾಗತ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಆಗಮಿಸಿ ಅವರು ಮಾತನಾಡಿ, ಯಶಸ್ಸನ್ನು ಹೊಂದಲು ವಿದ್ಯಾರ್ಥಿಗಳು ಅನುಸರಿಸಬೇಕಾದ ಜೀವನ ಕ್ರಮ ಕುರಿತಾಗಿ ವಿವರಣೆ ನೀಡಿದರು.

ಪ್ರಾಚಾರ್ಯ ಡಾ. ವಿ.ಎ.ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಮಹಾವಿದ್ಯಾಲಯವು ಒದಗಿಸಿರುವ ಸೌಲಭ್ಯಗಳ ಕುರಿತಾಗಿ ಸುಧೀರ್ಘವಾಗಿ ತಿಳಿಸಿ, ನಮ್ಮ ಕಾಲೇಜಿನಲ್ಲಿ ಕಲಿತ ವಿದ್ಯಾರ್ಥಿಗಳು ಸಮಾಜದ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಇಲ್ಲಿನ ಸಕಲ ಸೌಲಭ್ಯ ಸದುಪಯೋಗ ಮಾಡಿಕೊಂಡು ಉತ್ತಮಭವಿಷ್ಯ ಕಟ್ಟಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯ ಬೆಳಗಾವಿ ನಡೆಸಿದ ಪ್ರಥಮ ವರ್ಷದ ಪರೀಕ್ಷೆಗಳಲ್ಲಿ ಉತ್ತಮ ಶ್ರೇಯಾಂಕ ಪಡೆದು ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಪುರಸ್ಕರಿಸಲಾಯಿತು.

ವಿದ್ಯಾರ್ಥಿಗಳ ವಿವರ :

ಕಂಪ್ಯೂಟರ್ ಸೈನ್ಸ್ ವಿಭಾಗ : ಸಾನಾ ಐ (9.55), ಸಹನಾ ಟಿ (9.53), ಸುಮಧುರ ಜಿ (9.38)

ಕಂಪ್ಯೂಟರ್ ಸೈನ್ಸ್ (ಎ ಐ ಆಂಡ್ ಎಂ ಎಲ್) : ನಿರ್ಮಲಾ ಜಿ (9.35), ಸ್ನೇಹಾ ಜೆ (9), ಕವನಾ ಎಸ್ (8.85)

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗ: ಸ್ತುತಿ ಐ (9.35), ರಶ್ಮಿ ಟಿ (9.3), ಚೇತನ್ ಕೆ (9.3), ಚೈತಾಲಿ ಕೆ (9.3), ಚೈತ್ರ ಜಿ (9.25)

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗ : ಕಾವೇರಿ ಕೆ (8.80), ಶಶಾಂಕ್ ಬಿ (8.65), ಸುಸಾನ್ ಬಿ (8.60)

ಮೆಕ್ಯಾನಿಕಲ್ ವಿಭಾಗ : ಸೃಷ್ಟಿ ಬಿ (7.7), ಹಾರ್ದಿಕ್ ಕೆ (7.65), ಶ್ರೇಯಸ್ ಎಮ್ (7.6).

ಐ ಐ ಐ ವಿಭಾಗದ ಡೀನ್ ಡಾ. ಮಹೇಂದ್ರ ದೀಕ್ಷಿತ್ ಹಾಗೂ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸಮೀರ ಗಲಗಲಿ ಸಂಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಎಲ್ಲಾ ವಿಭಾಗದ ಡೀನ್ ಗಳು ಹಾಗೂ ವಿಭಾಗ ಮುಖ್ಯಸ್ಥರು, ಪ್ರಥಮ ವರ್ಷದ 350ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಪೋಷಕರು ಇದ್ದರು.ಡೀನ್ ಅಕಾಡೆಮಿಕ್ ಡಾ. ಗುರುರಾಜ ಹತ್ತಿ ಸ್ವಾಗತಿಸಿದರು. ಆಡಳಿತ ವಿಭಾಗದ ಡೀನ್ ಪ್ರೋ ಮಂಜುನಾಥ, ಸಂಶೋಧನಾ ಹಾಗೂ ಅಭಿವೃದ್ಧಿ ವಿಭಾಗದ ಡೀನ್ ಡಾ. ಶೈಲೇಶ ಚನ್ನಪಟ್ಟಣ ವಂದಿಸಿದರು.


Powered By KHUSHIHOST ® | License - ePaperCloud.com

# ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಯಶಸ್ವಿ



ಹಳಿಯಾಳ: ಧನಾತ್ಮಕ ಚಿಂತನೆ ಹಾಗೂ ಉತ್ತಮ ಹವ್ಯಾಸಗಳು ಯಶಸ್ಸಿನ ಹಾದಿಯಲ್ಲಿ ಸಾಗಲು ಸಹಕಾರಿ ಎಂದು ಡಾ. ಗೀತಾ ಬೊಮ್ಮನ ಗೌಡರ್ ಹೇಳಿದರು. ಪಟ್ಟಣದ ಕೆ ಎಲ್ ಎಸ್ ವಿ ಡಿ ಐ ಟಿ ಮಹಾವಿದ್ಯಾಲಯದಲ್ಲಿ 2025 – 26ರ ಸಾಲಿನ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವನ್ನು ಸಪ್ಟೆಂಬರ್ 8 ರಂದು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅತಿಥಿಯಾಗಿ ಧಾರವಾಡದ ಡಾ. ಗೀತಾ ಬೊಮ್ಮನ ಗೌಡರ್ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ, " ಯಶಸ್ಸನ್ನು ಹೊಂದಲು ವಿದ್ಯಾರ್ಥಿಗಳು ಅನುಸರಿಸಬೇಕಾದ ಜೀವನ ಕ್ರಮ ಕುರಿತಾಗಿ ವಿವರಣೆ ನೀಡಿದರು. ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡು, ಮಾನಸಿಕ ಸ್ಥೈರ್ಯ ಹಾಗೂ ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು". ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಮಹಾವಿದ್ಯಾಲಯವು ಒದಗಿಸಿರುವ ಸೌಲಭ್ಯಗಳ ಕುರಿತಾಗಿ ತಿಳಿಸಿದರು. ಪ್ರಥಮ ವರ್ಷಕ್ಕೆ ಪ್ರವೇಶ ತೆಗೆದುಕೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ಡೀನ್ ಅಕಾಡೆಮಿಕ್ ಡಾ. ಗುರುರಾಜ್ ಹತ್ತಿ ಸ್ವಾಗತಿಸಿದರು. ಆಡಳಿತ ವಿಭಾಗದ ಡೀನ್ ಪ್ರೊ. ಮಂಜುನಾಥ, ಸಂಶೋಧನಾ ಹಾಗೂ ಅಭಿವೃದ್ಧಿ ವಿಭಾಗದ ಡೀನ್ ಡಾ. ಶೈಲೇಶ್ ಚನ್ನಪಟ್ಟಣ ವಂದಿಸಿದರು. ಡೀನ್ ಐ ಐ ಐ ಡಾ. ಮಹೇಂದ್ರ ದೀಕ್ಷಿತ್, ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸಮೀರ್ ಗಲಗಲಿ ಸಂಯೋಜಿಸಿದ್ದರು.

ವಿ ತಾ ವಿ ಬೆಳಗಾವಿ ನಡೆಸಿದ ಪ್ರಥಮ ವರ್ಷದ ಪರೀಕ್ಷೆಗಳಲ್ಲಿ ಉತ್ತಮ ಶ್ರೇಯಾಂಕ ಪಡೆದು ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಪುರಸ್ಕರಿಸಲಾಯಿತು. ವಿದ್ಯಾರ್ಥಿಗಳ ವಿವರ ಇಂತಿದೆ :

ಕಂಪ್ಯೂಟರ್ ಸೈನ್ಸ್ ವಿಭಾಗ : ಸಾನಾ ಐ (9.55), ಸಹನಾ ಟಿ (9.53), ಸುಮಧುರ ಜಿ (9.38)

ಕಂಪ್ಯೂಟರ್ ಸೈನ್ಸ್ (ಎ ಐ ಆಂಡ್ ಎಂ ಎಲ್) : ನಿರ್ಮಲಾ ಜಿ (9.35), ಸ್ನೇಹಾ ಜೆ (9), ಕವನಾ ಎಸ್ (8.85) ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗ: ಸ್ತುತಿ ಐ (9.35), ರಶ್ಮಿ ಟಿ (9.3), ಚೇತನ್ ಕೆ (9.3), ಚೈತಾಲಿ ಕೆ (9.3), ಚೈತ್ರ ಜಿ (9.25) ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗ : ಕಾವೇರಿ ಕೆ (8.80), ಶಶಾಂಕ್ ಬಿ (8.65), ಸುಸಾನ್ ಬಿ (8.60) ಮೆಕ್ಯಾನಿಕಲ್ ವಿಭಾಗ : ಸೃಷ್ಟಿ ಬಿ (7.7), ಹಾರ್ದಿಕ್ ಕೆ (7.65), ಶ್ರೇಯಸ್ ಎಮ್ (7.6) ಮಹಾವಿದ್ಯಾಲಯದ ಎಲ್ಲಾ ವಿಭಾಗದ ಡೀನ್ ಗಳು ಹಾಗೂ ವಿಭಾಗ ಮುಖ್ಯಸ್ಥರು, ಪ್ರಥಮ ವರ್ಷದ 350ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಪೋಷಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


Powered By KHUSHIHOST ® | License - ePaperCloud.com